ಮೂಲ ದಾವಾ ಸಂಖ್ಯೆ 2/2013

ಪಿ.ಡಬ್ಲ್ಯೂ-3

**ದಿಃ 28.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ ಟಿ ಆರ್ ಎಸ್ ವಕೀಲರಿಂದಃ –**

ಯಾರು ಯಾರ ವಿರುದ್ಧ ಈ ದಾವೆ ಹೂಡಿದ್ದಾರೆ ಗೊತ್ತಾ ಎಂದರೆ ಸಿದ್ದಿಂಗಪ್ಪ ಬಸ್ಸಪ್ಪ ರವರ ವಿರುದ್ಧ ಶ್ರೀಕಾಂತ ಹೂಡಿದ್ದಾರೆ. ಪ್ರತಿವಾದಿಗಳ ಪರಿಚಯ ಇದೆಯಾ ಎಂದರೆ ಗೊತ್ತಿಲ್ಲಾ. ಈಶ್ವರಪ್ಪ ಗೊತ್ತಾ ಎಂದರೆ ಗೊತ್ತಿಲ್ಲಾ. ಅವರ ಹೆಸರು ಕೇಳಿದ್ದೇನೆ. ಯಾರು ಅವರು ಎಂದರೆ ಅಕ್ಕ ಪಕ್ಕದ ಮನೆಯವರು ಹೇಳಿದ್ದನ್ನು ಕೇಳಿದ್ದೇನೆ. ನನ್ನ ಮನೆಯಲ್ಲಿ ನಾನು, ನನ್ನ ಹೆಂಡತಿ, ನನ್ನ ತಾಯಿ,ಇದ್ದೇವೆ. ನಿಮ್ಮ ಮನೆಗೂ ಸುಜಾತ ರವರ ಮನೆಗೂ ಎಷ್ಟು ದೂರ ಇದೆ ಎಂದರೆ ನಡುವೆ ಒಂದೇ ಮನೆ ಇದೆ ಎನ್ನುತ್ತಾರೆ. ಶ್ರೀಕಾಂತ ವಿಚಾರದಲ್ಲಿ ಏನು ಪತ್ರ ಮಾಡಿಕೊಂಡಿದ್ದಾರೆ ಗೊತ್ತಾ ಎಂದರೆ ಗೊತ್ತಿದೆ ಯಾವ ದಿನಾಂಕ ಯಾವ ಇಸ್ವಿಯಲ್ಲಿ ದತ್ತು ಕಾರ್ಯಕ್ರಮ ನಡೆಯಿತು ಎಂದರೆ ಸಾಕ್ಷಿಯು ದಿನಾಂಕ 10.08.2005 ರಲ್ಲಿ ಆಗಿರುತ್ತದೆ ಎನ್ನುತ್ತಾರೆ. ನೀವೇನಾದರು ದತ್ತು ಪತ್ರಿಕೆಯಲ್ಲಿ ಸಗಿಹಿ ಮಾಡಿದ್ದೀರಾ ಎಂದರೆ ಇಲ್ಲಾ. ದಿನಾಂಕ 10.08.2005 ರಂದು ಯಾವುದೇ ದತ್ತು ಕಾರ್ಯಕ್ರಮ ನಡೆದಿರುವುದಿಲ್ಲಾ ಎಂದರೆ ಸರಿಯಲ್ಲ. ನಿಮ್ಮ ಮನೆಯಲ್ಲಿ ನೀವು ಮತ್ತು ನಿಮ್ಮ ತಾಯಿ ವಾಸವಾಗಿದ್ದೀರಾ ಎಂದರೆ ಸರಿಯಲ್ಲ. ನಾವು ಮೂರು ಜನ ಇದ್ದೇವೆ ಎನ್ನುತ್ತಾರೆ. ಎಷ್ಟು ಜನ ಭಾಗವಹಿಸಿದ್ದರು ಎಂದರೆ 100-150 ಜನ ಭಾಗವಹಿಸಿದ್ದರು. ಆ ದಿನ ಪೋಟೋ ವಿಡಿಯೋ ಮಾಡಿದ್ದಾರೆ ಎಂರದೆ ಇಲ್ಲಾ. ಸಾಮಾನ್ಯವಾಗಿ ಯಾವುಕಿದೇ ಕಾರ್ಯಕ್ರಮಗಳಲ್ಲಿ ಪೋಟೋ ವಿಡಿಯೋ ಮಾಡುತ್ತಾರೆಂದರೆ ಸರಿ ಈ ಕಾರ್ಯಕ್ರಮದಲ್ಲಿ ಮಾಡಿರುವುದಿಲ್ಲಾ ಎನ್ನುತ್ತಾರೆ ಯಾವುದೇ ದತ್ತು ಕಾರ್ಯಕ್ರಮ ನಡೆಯದೇ ಇದ್ದ ಕಾರಣ ಪೋಟೋ ವಿಡಿಯೋ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. 2005 ನೇ ಇಸ್ವಿಯಲ್ಲಿ ಮಹಾದೇವಮ್ಮನಿಗೆ ಎಷ್ಟು ವಯಸ್ಸು ಆಗಿತ್ತು ಎಂದರೆ ಗೊತ್ತಿಲ್ಲಾ. ಮಹಾದೇಮ್ಮನಿಗೆ ಮಾನಸಿಕ ಆರೋಗ್ಯ ಸರಿಯಾಗಿ ಇರಲಿಲ್ಲ ಎಂದರೆ ಸರಿಯಲ್ಲ. ಆಕೆಗೆ ಓಡಾಡಲು

ಮೂಲ ದಾವಾ ಸಂಖ್ಯೆ 2/2013

ಪಿ.ಡಬ್ಲ್ಯೂ-3

ಬರುತ್ತಿರಲಿಲ್ಲ ಎಂರದೆ ಸರಿಯಲ್ಲ. ಆಕೆಗೆ 100 ವರ್ಷ ವಯಸ್ಸು ಆಗಿತ್ತು ಎಂದರೆ ಇರಬಹುದು ಎನ್ನುತ್ತಾರೆ. ನಿಜವಾಗಿಯು ಮಹಾದೇವಮ್ಮನಿಗೆ ದತ್ತು ತೆಗೆದುಕೊಳ್ಳಬೇಕು ಎನ್ನುವ ಇಚ್ಚೆ ಇದಿದ್ದರೆ ಅವರು ಚಿಕ್ಕ ವಯಸ್ಸಿನಲ್ಲಿಯೇ ದತ್ತು ತೆಗೆದುಕೊಳ್ಳುತ್ತಿದ್ದರು. ಆದರೆ ಅವರಿಗೆ ಯಾವುದೇ ದತ್ತು ತೆಗೆದುಕೊಳ್ಳುವ ಇಚ್ಚೆ ಇರಲಿಲ್ಲ ಎಂದರೆ ಸರಿಯಲ್ಲ. ಆಸ್ತಿಯನ್ನು ಸುಜಾತರವರು ತನ್ನ ಮಗನ ಮೂಲಕ ಪಡೆಯುವ ಉದ್ದೇಶದಿಂದ ದತ್ತು ಕಾರ್ಯಕ್ರಮ ಆಗಿದೆ ಎಂ ದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಆ ದಿನ 100-150 ಜನ ಭಾಗವಹಿಸಿದ್ದರು ಎಂದು ಹೇಳುತ್ತೀರಲ್ಲಾ 10-15 ಜನರ ಹೆಸರನ್ನು ಹೇಳಲು ಆಗುತ್ತದೆಯಾ ಎಂದರೆ 4-5 ಜನರ ಹೆಸರನ್ನು ಹೇಳುತ್ತೇನೆ ಎನ್ನುತ್ತಾರೆ. ಬಸವರಾಜ, ಸಿದ್ಲಿಂಗಪ್ಪ, ಈಶ್ವರಪ್ಪ, ವೀರಣ್ಣ, ಶೇಖರಣ್ಣ, ಹಾಲೇಶಪ್ಪ ಮಂಜಪ್ಪ ಎನ್ನುತ್ತಾರೆ. ನೀವು ಹೇಳಿದ ವ್ಯಕ್ತಿಗಳ ಹೆಸರುಗಳು ನಿಮ್ಮ ಊರಿನವರು ಅಲ್ಲಾ ಎಂದರೆ ಸರಿಯಲ್ಲ. ಆ ರೀತಿಯಾವುದೇ ವ್ಯಕ್ತಿಗಳ ಹೆಸರುಗಳು ಇಲ್ಲಾ ಕಾಲ್ಪನಿಕೆ ಹೆಸರು ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಿಮಗೆ ವ್ಯವಸಾಯ ಮಾಡಲು ಆಗುವುದಿಲ್ಲಾ ನಿಮ್ಮ ಆರೋಗ್ಯ ಸರಿ ಇಲ್ಲ ಎಂದರೆ ಸರಿ. ನನ್ನ ಹೆಂಡತಿ ನನ್ನನ್ನು ನೋಡಿಕೊಳ್ಳುತ್ತಾರೆ. ನಿಮಗೆ ಸುಜಾತರವರು ಹಣಕಾಸಿನ ಸಹಾಯ ಮಾಡುತ್ತಾರೆ ಆದುದರಿಂದ ಅವರ ಪರವಾಗಿ ಸಾಕ್ಷ್ಯ ಹೇಳಲು ಬಂದಿದ್ದೀರಾ ಎಂದರೆ ಸರಿಯಲ್ಲ. ವಾದಿ ಶ್ರೀಕಾಂತ, ತಾಯಿ ಸುಜಾತ, ಸುಜಾತರವರ ಗಂಡ ಸಿದ್ದಲಿಂಗಪ್ಪ ಮತ್ತು ಅವರ ವಕೀಲರು ಮತ್ತು ಅವರೆಲ್ಲರೂ ಸಂಬಂಧಿಕರು ಎಂದರೆ ಸರಿಯಲ್ಲ. ಸದರಿಯವರೆಲ್ಲರೂ ಒಂದೇ ಜನಾಂಗದವರು ಎಂದರೆ ಸರಿ. ಅವರೆಲ್ಲರ ಮಾತನ್ನು ಕೇಳಿಕೊಂಡು ದತ್ತು ಸಮಾರಂಭ ನಡೆಯಿತು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.

ಮೂಲ ದಾವಾ ಸಂಖ್ಯೆ 2/2013

ಪಿ.ಡಬ್ಲ್ಯೂ-5

**ದಿಃ 28.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಪರ ಶ್ರೀ ಟಿ ಆರ್ ಎಸ್ ವಕೀಲರಿಂದಃ –**

ನಾನು ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಮಹಾದೇವಮ್ಮನ ಗಂಡ ಈಶ್ವರಪನನ್ನು ನಾನು ನೋಡಿರುವುದಿಲ್ಲ. ಅವರ ಅಣ್ಣ ತಮ್ಮಂದಿರು ನನಗೆ ಗೊತ್ತಿಲ್ಲಾ ಎಂದು ನಂತರ ಗೊತ್ತು ಎನ್ನುತ್ತಾರೆ. ಅವರ ಅಣ್ಣ ಬಸ್ಸಪ್ಪ ಎನ್ನುತ್ತಾರೆ. ಅವರಿಗೆ ಎಷ್ಟು ಜನ ಮಕ್ಕಳು ಗೊತ್ತಾ ಎಂದರೆ ಗೊತ್ತಿಲ್ಲಾ. ಸಿದ್ಲಿಂಗಪ್ಪ ನವರಿಗೆ ಒಬ್ಬನೇ ಮಗ. ಸಿದ್ಲಿಂಗಪ್ಪ ಮತ್ತು ಬಸ್ಸಪ್ಪ ರವರುಗಳನ್ನು ದಿನೀವು ನೋಡಿದ್ದೀರಾ ಎಂದರೆ ನೋಡಿದ್ದೇನೆ. ನಿಮ್ಮ ಊರು ಕಿತ್ತೂರು ಎಂದರೆ ಸರಿ. ನೀವು ವಾದಿ, ಶ್ರೀಕಾಂತ ತಾಯಿ ಸುಜಾತ, ಸುಜಾತರವರ ಗಂಡ ಸಿದ್ಲಿಂಗಪ್ಪ ಮತ್ತು ಅಶವರ ವಕೀಲರು ಎಲ್ಲರೂ ಸಂಬಂಧಿಕರು ಎಂದರೆ ಸರಿಯಲ್ಲ. ನೀವು ಮತ್ತು ಸದರಿಯವರು ಎಲ್ಲರೂ ಒಂದೇ ಜನಾಂಗದವರು ಎಂದರೆ ಹೌದು ಎನ್ನುತ್ತಾರೆ. ನಿಮ್ಮ ವೈಯಕ್ತಿಕ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಿವಾದಗಳು ಇವೆ ಎಂದರೆ ಸರಿಯಲ್ಲ. ನಿಮ್ಮ ಕಣಕ್ಕೆ ಸಂಬಂಧಪಟ್ಟಂತೆ ವಿವಾದ ಆನಗೋಡು ಡೆಪ್ಯೂಟಿ ತಹಶೀಲ್ದಾರ ಮುಂದೆ ಚಾಲ್ತಿ ಇದೆ ಎಂದರೆ ಇಲ್ಲಾ. ನಿಮ್ಮ ಅಣ್ಣ ತಮ್ಮಂದಿರ ನಡುವೆ ಇರುವ ಪಾಲು ವಿಭಾಗ ವ್ಯಾಜ್ಯ ಕೂಡ ಚಾಲ್ತಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆಗೆ ನಾನು ಒಬ್ಬನೇ ಮಗ ಹಾಗಾಗಿ ಯಾವುದೇ ದಾವೆಗಳು ಚಾಲ್ತಿ ಇಲ್ಲಾ ಎನ್ನುತ್ತಾರೆ. ನಿಮ್ಮ ಆಸ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ನೀವು ಇಟ್ಟುಕೊಂಡಿರುವ ವಕೀಲರು ವಾದಿ ಇಟ್ಟುಕೊಂಡಿರುವ ವಕೀಲರು ಒಂದೇ ಎಂದರೆ ಸರಿಯಲ್ಲ. ದಿನಾಂಕ 10.08.2005 ನಡೆಯಿತು ಎನ್ನಲಾದ ದತ್ತು ಕಾರ್ಯಕ್ರಮಕ್ಕೆ ಎಷ್ಟು ಜನ ಭಾಗ ವಹಿಸಿದ್ರಿ ಎಂದರೆ 150-200 ಜನ ಇದ್ದರು ಎನ್ನುತ್ತಾರೆ. ಆ ದಿನ ಪೋಟೋ ಮತ್ತು ವಿಡಿಯೋ  ಮಾಡಿಸಿದ್ರಾ ಎಂರದೆ ಇಲ್ಲಾ. ಸಾಮಾನ್ಯವಾಗಿ ಶುಭ ಸಮಾರಂಭಗಳಲ್ಲಿ ಪೋಟೋ ವಿಡಿಯೋ ಮಾಡುತ್ತಾರೆ ಎಂದರೆ ಸರಿ. ಆ ದಿನ ಯಾವುದೇ ದತ್ತು ಕಾರ್ಯಕ್ರಮ ನಡೆಯದೇ ಇದ್ದ ಕಾರಣ ಯಾವುದೇ ಪೋಟೋ ವಿಡಿಯೋ

ಮೂಲ ದಾವಾ ಸಂಖ್ಯೆ 2/2013

ಪಿ.ಡಬ್ಲ್ಯೂ-5

ಇಲ್ಲಾ ಎಂದರೆ ಸರಿಯಲ್ಲ. 2005 ರಲ್ಲಿ ಮಹಾದೇವಮ್ಮನಿಗೆ 100 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 80-85 ವರ್ಷ ಆಗಿತ್ತು ಎನ್ನುತ್ತಾರೆ. ಮಹಾದೇವಮ್ಮನ ಗಂಡ ಈಶ್ವರಪ್ಪ ಕಿತ್ತೂರಿಗೆ ಕಾರ್ಯಕ್ಕೆ ಎಂದು ಬಂದಾಗ ಮೃತ ಹೊಂದಿರುತ್ತಾರೆ ಎಂದರೆ ಸರಿ. ಮಹಾದೇವಮ್ಮ ಮದುವೆ ಆದ ಇಸ್ವಿ ಎಷ್ಟು ಎಂದರೆ ಗೊತ್ತಿಲ್ಲಾ. ಈಶ್ವರಪ್ಪ ಮೃತ ಹೊಂದಿದ ಇಸ್ವಿ ಗೊತ್ತಿಲ್ಲಾ. ಮಹಾದೇವಮ್ಮ ರವರ ಗಂಡ ಮೃತ ಹೊಂದಿದ ಕಾರಣ ಮಹಾದೇವಮ್ಮ ಸ್ವಲ್ಪ ಮಾನಸಿಕವಾಗಿ ಸ್ಥಿಮಿತ ಕಳೆದುಕೊಂಡಿದ್ದರು ಎಂದರೆ ಸರಿಯಲ್ಲ. ಚೆನ್ನಾಗಿ ಇದ್ದರು ಎನ್ನುತ್ತಾರೆ. ಮಹಾದೇವಮ್ಮನಿಗೆ ಕಣ್ಣು ಕಾಣುತ್ತಿರಲಿಲ್ಲ ಕಿವಿ ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನೀವೇನಾದರು ದತ್ತು ಪತ್ರಕ್ಕೆ ಸಹಿ ಮಾಡಿದ್ದೀರಾ ಎಂದರೆ ಇಲ್ಲಾ. ಆ ದಿನ ದತ್ತು ಕಾರ್ಯಕ್ರಮದಲ್ಲಿ ಹಾಜರಾಗಿದ್ದ 10 ಜನರ ಹೆಸರು ಹೇಳಲು ಆಗುತ್ತದೆಯಾ ಎಂದರೆ ಹೇಳುತ್ತೇನೆ. ಚಂದ್ರಶೇಖರಪ್ಪ, ನಂಜಪ್ಪ, ಕೊಟ್ರಪ್ಪ, ಬಮ್ಮಲಿಂಗಪ್ಪ, ಬಿದ್ದಹನುಮಪ್ಪ, ರಾಜಪ್ಪ, ಹಾಲಪ್ಪ, ರೇವಣಸಿದ್ದಪ್ಪ, ಮರಳುಸಿದ್ದಪ್ಪ ಪಾಲಪ್ಪ ಎನ್ನುತ್ತಾರೆ. ಸದರಿಯವರ ಹೆಸರುಗಳು ಕಾಲ್ಪನಿಕ ಹೆಸರುಗಳು ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಇರುವವರ ಹೆಸರುಗಳು ಎನ್ನುತ್ತಾರೆ. ಸುಜಾತಾ ನೀವು ವಿಶ್ವಾಸಿಕರು ಎಂದರೆ ಪರಿಚಯಸ್ಥರು ಎನ್ನುತ್ತಾರೆ. ಸುಜಾತಾ ರವರು ವಿಶ್ವಾಸಿಕರು ಕುಲಬಾಂಧವರು ಪರಿಚಯಸ್ಥರು ಆದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಹರಪನಹಳ್ಳಿ.